**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 18.12.2025**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ವಾದಿಗಳೆಲ್ಲರು ನನಗೆ ಸಂಬಂಧದಲ್ಲಿ ದೊಡ್ಡಪ್ಪ ಚಿಕ್ಕಪ್ಪನ ಮಕ್ಕಳಾಗಬೇಕು. ವಾದಿಗಳು ದಾವೆಯನ್ನು ಯಾವ ಪರಿಹಾರ ಕೋರಿ ಸಲ್ಲಿಸಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ನನ್ನ ವಕೀಲರು ನನ್ನ ಪರವಾಗಿ ಬರೆದು ಹಾಕಿರುವ ಪ್ರತಿವಾದ ಪತ್ರದ ಸಂಗತಿಗಳನ್ನು ನಾನು ತಿಳಿದುಕೊಂಡಿಲ್ಲ. ಪ್ರಮಾಣಪತ್ರದ ಸಂಗತಿಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ನಾನು 3 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಕನ್ನಡ ಒದಲು ಸ್ವಲ್ಪ ಬರುತ್ತದೆ, ಕನ್ನಡ ಬರೆಯಲು ಬರುವುದಿಲ್ಲ. ನಿವು ಈ ಹಿಂದೆ ನಾರಾಯಣಪುರ ಗ್ರಾಮ ಪಂಚಾಯತಿಯಲ್ಲಿ ಸದಸ್ಯರಾಗಿರುತ್ತೀರಾ ಎಂದರೆ ಸರಿ. ನೀವು ಗ್ರಾಮ ಪಂಚಾಯತಿ ಸದಸ್ಯರಾಗಿದ್ದಾಗ ನಿಮ್ಮ ಕುಟುಂಬಂದ ಮನೆಯ ಖಾತೆಗಳನ್ನು ನಿಮ್ಮ ಕುಟುಂಬದ ಸದಸ್ಯರುಗಳ ಹೆಸರಿಗೆ ಮಾಡಿಸಿರುತ್ತೀರಾ ಎಂದರೆ ಸರಿಯಲ್ಲ. ನಿಮ್ಮ ತಾತನ ಹೆಸರು ಸಣ್ಣೇಗೌಡ ಎಂದರೆ ಸರಿ ಹಾಗುವ ಅಜ್ಜಿ ಹೆಸರು ಮಾದಮ್ಮ ಎಂದರೆ ಸರಿ. ಮಾದಮ್ಮನವರ ತಂದೆ ಹೆಸರು ಕೃಷ್ಣೇಗೌಡ.

2. ದಾವಾ ಸ್ವತ್ತುಗಳು ಎಲ್ಲರು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ದಾವಾ ಷೆಡೂಲ್ ಸ್ವತ್ತುಗಳ 1, 2, 4, 6 ಮತ್ತು 7, 8 ಸ್ವತ್ತುಗಳ ಖಾತೆ ಈಗಲೂ ನಿಮ್ಮ ತಂದೆ ಹೆಸರಿನಲ್ಲಿವೆ ಎಂದರೆ ಸರಿ. ಐಟಂ ನಂಃ 3, 5 ಮತ್ತು 7 ಸ್ವತ್ತುಗಳ ಖಾತೆ ನಿಮ್ಮ ಅಜ್ಜಿ ಮಾದಮ್ಮನವರ

ಹೆಸರಿನಲ್ಲಿದೆ ಎಂದರೆ ಸರಿ. ದಾವಾಸ್ತಿಗಳ ಕಂದಾಯ ದಾಖಲಾತಿಗಳನ್ನು ನಾನು ನೋಡಿದ್ದೇನೆ. ನಿಮ್ಮತಂದೆಯ ಹೆಸರಿನಲ್ಲಿರುವ ಆಸ್ತಿಗಳು ಮುಂಚೆ ಯಾರ ಹೆಸರಿನಲ್ಲಿದ್ದವು ಎಂದರೆ ಸಾಕ್ಷಿ ನಮ್ಮ ಅಜ್ಜಿ ಮಾದಮ್ಮನವರ ಹೆಸರಿನಲ್ಲಿದ್ದವು ಎಂದು ಹೇಳುತ್ತಾರೆ ಹಾಗೂ ಸಾಕ್ಷಿ ಸ್ವತಃ ನಮ್ಮ ಅಜ್ಜಿಯ ತಾಯಿ ಮನೆಯ ಆಸ್ತಿಗಳು ಎಂದು ಹೇಳುತ್ತಾರೆ.

3. ನಿಮ್ಮ ತಾತನ ತಂದೆ ಹೆಸರು ಏನು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. 1976-77 ನೇ ಸಾಲಿನಲ್ಲಿ ನಿಮ್ಮ ತಾತ ಮತ್ತು ಅಜ್ಜಿ ಹೆಸರಿನಲ್ಲಿದ್ದ ಆಸ್ತಿಗಳು ನಿಮ್ಮ ತಂದೆ ಹೆಸರಿಗೆ ವರ್ಗಾವಣೆಯಾಗಿವೆ ಎಂದರೆ ಸರಿಯಲ್ಲ. ನಂತರ ಸಾಕ್ಷಿ ನಮ್ಮ ಚಿಕ್ಕಪ್ಪ ನಮ್ಮ ತಾತ ಅಜ್ಜಿ ಮೃತರಾದ ನಂತರ ನಮ್ಮ ತಂದೆ ಹೆಸರಿಗೆ ಖಾತೆ ಮಾಡಿಸಿದರು ಎಂದು ಹೇಳುತ್ತಾರೆ. ಆ ಖಾತೆ ಪೌತಿ ವಾರಸು ಮೇರೆಗೆ ಆಗಿದೆ ಎಂದರೆ ಸರಿ. ನಿಮ್ಮ ತಂದೆ ಹೆಸರಿಗೆ ಖಾತೆ ಬದಲಾವಣೆ ಮಾಡುವಾಗ ನಿಮ್ಮ ದೊಡ್ಡಪ್ಪ ಸಿದ್ದೇಗೌಡ, ಮರೀಗೌಡ ಮತ್ತು ಚಿಕ್ಕಪ್ಪರಾದ ಶಿವಯ್ಯ ಮತ್ತು ಸೀತಾರಾಮರವರು ಸಮ್ಮತಿ ನೀಡಿದ ಮೇರೆಗೆ ಖಾತೆ ಬದಲಾವಣೆಯಾಗಿತ್ತು ಎಂದರೆ ಸರಿ. ಸಾಕ್ಷಿ ಸ್ವತಃ ಸೀತಾರಾಮುರವರು ನಮ್ಮ ಅಜ್ಜಿಯ ತಮ್ಮನ ಮನೆಗೆ ದತ್ತು ಹೋಗಿದ್ದಾರೆಂದು ಹೇಳುತ್ತಾರೆ. ನಮ್ಮ ದೊಡ್ಡಪ್ಪ ಮತ್ತು ಚಿಕ್ಕಪ್ಪ ಮತ್ತು ನಮ್ಮ ತಂದೆ ಈಗ ಜೀವಂತ ಇಲ್ಲ ಎಂದರೆ ಸರಿ.

4. ದಾವಾ ಐಟಂ 7 ಮತ್ತು 8 ಹೇಮಾವತಿ ನಾಲೆಗೆ 1 ಎಕರೆ 27 ಗುಂಟೆ ಭೂ ಸ್ವಾಧೀನವಾಗಿದೆ ಎಂದರೆ ಸರಿ. ಆ ಜಮೀನಿನ ಪರಿಹಾರದ ಹಣ ಬಂದಾಗ ನಿಮ್ಮ ತಂದೆ ಪೌತಿಯಾಗಿದ್ದರು ಎಂದರೆ ಸರಿ. ಪರಿಹಾರದ ಹಣದ ವ್ಯವಹಾರಣೆಗಳನ್ನು ನೀವೆ ನಡೆಸಿ ಪರಿಹಾರದ ಹಣವನ್ನು ಪಡೆದುಕೊಂಡಿರುತ್ತೀರಾ ಎಂದರೆ ಸರಿ. ಸಾಕ್ಷಿ ಸ್ವತಃ ಎಲ್ಲ ಜಮೀನುಗಳನ್ನು ಮಟ್ಟ ಮಾಡಿಸಿ, ಮಿಷಿನ್ ಮನೆ ಕಟ್ಟಿಸಿ ಕೊಟ್ಟಿದ್ದೇನೆಂದು ಹೇಳುತ್ತಾರೆ. ಭೂ ಸ್ವಾಧೀನದ ಪರಹಾರದ ಹಣ ರೂ.3,38,000/- ಬಂದಿತ್ತು. ಪರಿಹಾರದ ಹಣ ಪಡೆದು ಅಭಿವೃದ್ಧಿ ಮಾಡಿರುವ ಸಂಗತಿಯನ್ನು ನನ್ನ ಪ್ರಮಾಣಪತ್ರದಲ್ಲಿ ಹೇಳಿಲ್ಲ. ಭೂ ಸ್ವಾಧಿನದ ಪರಿಹಾರದ ಹಣವನ್ನು ನಿಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡಿದ್ದರು ಭೂಮಿಯನ್ನು ಅಭಿವೃದ್ಧಿ ಪಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

5. ವಾದಿಗಳು ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ 1 ರಿಂದ 4 ನೇ ಪ್ರತಿವಾದಿಗಳಿಗೆ ವಕೀಲರಿಂದ ನೋಟೀಸು ಕಳುಹಿಸಿದ್ದರು ಎಂದರೆ ಸರಿ. ಆ ನೋಟೀಸು ನನಗೆ ಖುದ್ದು ಜಾರಿಯಾಗಿದೆ ಎಂದರೆ ಸರಿ. ಆ ನೋಟೀಸ್ ನಲ್ಲಿ ಭೂ ಸ್ವಾಧೀನ ಪರಿಹಾರದ ಹಣದಲ್ಲಿ ಭಾಗ ಕೊಡಿ ಎಂದು ಹಾಗೂ ದಾವಾ ಸ್ವತ್ತುಗಳಲ್ಲಿ ಭಾಗ ಕೊಡಿ ಎಂದು ಕೇಳಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ನೋಟೀಸ್ ಗೆ ವಕೀಲರಿಂದ ಪ್ರತ್ಯುತ್ತರ ಕೊಟ್ಟಿದೆಯೋ ಇಲ್ಲವೋ ಈಗ ಹೇಳಲು ಜ್ಞಾಪಕ ಇಲ್ಲ. ನೋಟೀಸ್ ಗೆ ಪ್ರತ್ಯುತ್ತರ ಕೊಟ್ಟಿರದೆ ಇದ್ದರು ಈಗ ಜ್ಞಾಪಕ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ

ಸರಿಯಲ್ಲ. ನಿಮ್ಮ ಚಿಕ್ಕಪ್ಪ ಸೀತಾರಾಮುರವನ್ನು ದತ್ತು ಕೊಟ್ಟ ಕಾರ್ಯಕ್ರಮದಲ್ಲಿ ನೀವು ಭಾಗವಹಿಸಿರುತ್ತೀರಾ ಎಂದರೆ ಸಾಕ್ಷಿ ನಾನು ಆಗ ಹುಟ್ಟಿರಲಿಲ್ಲವೆಂದು ಹೇಳುತ್ತಾರೆ. ಈ ಸಂಗತಿಯನ್ನು ನನ್ನ ಅಜ್ಜಿ ಹೇಳಿದ್ದರು ಎಂದು ಹೇಳುತ್ತಾರೆ. 1966 ರಲ್ಲಿ ಸೀತಾರಾಮುರವರಗೆ ಎಷ್ಟು ವಯಸ್ಸಾಗಿತ್ತು ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ 14 ವರ್ಷ ವಯಸ್ಸಾಗಿತ್ತು ಎಂದು ಹೇಳುತ್ತಾರೆ. ಸೀತಾರಾಮುರವರಿಗೆ 1966 ರಲ್ಲಿ 14 ವರ್ಷ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ.1 ರ ಪ್ರಕಾರ ಸೀತಾರಾಮುರವರಿಗೆ 1966 ರಲ್ಲಿ 27 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಸೀತಾರಾಮುರವರು ನೀವು ಹೇಳುವಂತೆ ದತ್ತು ಹೋಗಿಲ್ಲ ಎಂದರೆ ಸರಿಯಲ್ಲ. ನಿಡಿ.1 ನ್ನು ಸೃಷ್ಟಿಸಿ ಹಾಜರು ಪಡಿಸಿದೆ ಎಂದರೆ ಸರಿಯಲ್ಲ. ಸೀತಾರಾಮುರವರಿಗೆ ದಾವಾಸ್ತಿಗಳಲ್ಲಿ ನಿಮ್ಮ ತಂದೆಗೆ ಇರುವಂತೆ ಹಕ್ಕಿದೆ ಎಂದರೆ ಸರಿಯಲ್ಲ.

6. ಮೌಖಿಕ ವಿಭಾಗವಾಗಿರುವ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ವಿಭಾಗ ಪಟ್ಟಿ ಆಗಿದೆ ಅದು 2 ಮತ್ತು 3 ನೇ ವಾದಿಗಳ ಬಳಿ ಇದೆ ಎಂದು ಹೇಳುತ್ತಾರೆ. ವಿಭಾಗವಾಗಿರುವ ಬಗ್ಗೆ ನಿಮಗೆ ಯಾವಾಗ ತಿಳಿಯಿತು ಎಂದರೆ ಸಾಕ್ಷಿ 1994 ರಲ್ಲಿ ತಿಳಿಯಿತು ಎಂದು ಹೇಳುತ್ತಾರೆ. ಸಾಕ್ಷಿ ಸ್ವತಃ 1980 ರಲ್ಲಿ ಮೌಖಿಕ ವಿಭಾಗವಾದರೂ ಅದನ್ನು 1994 ರಲ್ಲಿ ಬರವಣಿಗೆ ಮೂಲಕ ಮಾಡಿಕೊಂಡರು ಎಂದು ಹೇಳುತ್ತಾರೆ. ಈಗ ಹೇಳುತ್ತಿರುವ ಸಂಗತಿಯನ್ನು ನಿಮ್ಮ ಪ್ರಮಾಣಪತ್ರದಲ್ಲಿ ಹಾಗೂ ಪ್ರತಿವಾದ ಪತ್ರದಲ್ಲಿ ಬರೆಸಲು ತೊಂದರೆ

ಇತ್ತಾ ಎಂದರೆ ಸಾಕ್ಷಿ ಇದೆಲ್ಲಾ ನನಗೆ ಗೊತ್ತಿರಲಿಲ್ಲ ಆದ್ದರಿಂದ ಬರೆಸಿಲ್ಲ ಎಂದು ಹೇಳುತ್ತಾರೆ. 1980 ರ ಮೌಖಿಕ ವಿಭಾಗದಂತೆ ಹಾಗೂ 1994 ರ ವಿಭಾಗ ಪಟ್ಟಿಯಂತೆ ಕಂದಾಯ ದಾಖಲಾತಿಗಳು ಅವರವರ ಹೆಸರುಗಳಿಗೆ ಬದಲಾವಣೆಯಾಗಿಲ್ಲ. ನೀವು ಹೇಳುತ್ತಿರುವಂತೆ ಇಲ್ಲಿಯವರೆಗೂ ನಿಮ್ಮ ಕುಟುಂಬದಲ್ಲಿ ಯಾವುದೇ ರೀತಿಯ ವಿಭಾಗವಾಗಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾಸ್ತಿಗಳಲ್ಲಿ ಹಾಗೂ ಭೂ ಸ್ವಾಧೀನ ಪರಿಹಾರದ ಹಣದಲ್ಲಿ ವಿಭಾಗ ಕೊಡಬೇಕಾಗುತ್ತದೆಂದು ಮೌಖಿಕ ಮತ್ತು ಲಿಖಿತ ವಿಭಾಗವಾಗಿದೆ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

7. ದಿಃ 18.11.1994 ರ ಮರಣಶಾಸನ ಪತ್ರ ಎಲ್ಲಿದೆ ಎಂದರೆ ಸಾಕ್ಷಿ ಮನೆ ಬದಲಾವಣೆ ಮಾಡುವಾಗ ಅಥವಾ ನಾನು ವಕೀಲರ ಕಚೇರಿಗೆ ತಂದು ವಾಪಸ್ಸು ತೆಗೆದುಕೊಂಡು ಹೋಗುವ ದಾರಿ ಮಧ್ಯೆ ಕಳೆದು ಹೋಗಿದೆ ಎಂದು ಹೇಳುತ್ತಾರೆ. ಮರೀಗೌಡರು ದಿಃ 26.10.2007 ರಂದು ಮರಣ ಹೊಂದಿದರು. ಮರಣಶಾಸನ ಮಾಡುವಾಗ ಕಂದಾಯ ದಾಖಲಾತಿಗಳು ಮರೀಗೌಡರ ಹೆಸರಿನಲ್ಲಿ ಇದ್ದವಾ ಎಂದರೆ ಸಾಕ್ಷಿ ಇರಲಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಸ್ವತಃ ನಂತರ ನಮ್ಮ ತಂದೆ ಹೆಸರಿನಿಂದ ಪಾಲುಪಟ್ಟಿ ಪ್ರಕಾರ ಬದಲಾವಣೆ ಮಾಡಿಕೊಂಡರು ಎಂದು ಹೇಳುತ್ತಾರೆ. ಮರೀಗೌಡರವರ ಹೆಸರಿಗೆ ಮರಣಶಾಸನ ಮಾಡಿರುತ್ತಾರೆ ಎನ್ನಲಾದ ಸ್ವತ್ತುಗಳು ಯಾವತ್ತು ಖಾತೆ ಬಂದಿಲ್ಲ ಎಂದರೆ

*ಸರಿ. ಮರಣಶಾಸನದ ಪ್ರಕಾರ ಕೆಂಪೇಗೌಡ ಮತ್ತು ಮುದ್ದೇಗೌಡರ ಹೆಸರಿಗೆ ಖಾತೆಗಳು ಬದಲಾವಣೆಯಾಗಿಲ್ಲ. ದಿಃ 18.11.1994 ರಂದು ಮರೀಗೌಡರು ಯಾವುದೇ ಮರಣಶಾಸನ ಪತ್ರ ಮಾಡಿಲ್ಲ ಎಂದರೆ ಸರಿಯಲ್ಲ. ನೀವು ಹೇಳುತ್ತಿರುವಂತೆ ಕೇಂಪೇಗೌಡರು ಮತ್ತು ಮುದ್ದೇಗೌಡರ ವಾರಸುದಾರರು ಪ್ರತ್ಯೇಕ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ವಾದಿಗಳ ಹಿಸ್ಸೆ ಹಕ್ಕನ್ನು ತಪ್ಪಿಸಬೇಕೆಂದು ಮರೀಗೌಡರವರು ಮರಣ ಶಾಸನ ಪತ್ರ ಮಾಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಮರಣಶಾಸನ ಪತ್ರ ಕಳೆದು ಹೋಗಿದೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.*

***ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿ ಮುಂದೂಡಲಾಯಿತು.***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***